## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ ಃ 815/2017**

**ಚಾಸಾ ಃ 7**
**ಪ್ರಾಸಾ ಃ 17**

| | |
|---|---|
| **ಹೆಸರು** | ಃ ದೇವರಾಜು |
| **ತಂದೆಯ ಹೆಸರು** | ಃ ಮಲ್ಲಯ್ಯ |
| **ವಯಸ್ಸು** | ಃ 74 ವರ್ಷ |
| **ಉದ್ಯೋಗ** | ಃ ಕೃಷಿಕ |
| **ವಾಸಸ್ಥಳ** | ಃ ಸಿಂಗಮಾರನಹಳ್ಳಿ, ಹುಣಸೂರು ತಾ|| |

**ದಿನಾಂಕ ಃ 04-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ಚಾಸಾ-1 ರಿಂದ 6, 9 ಹಾಗೂ 10 ರವರ ಪರಿಚಯವಿರುವುದಿಲ್ಲ. ಚಾಸಾ8 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿಯ ಪರಿಚಯವಿರುತ್ತದೆ. ಅವರು ನನ್ನ ಅಕ್ಕನ ಮಗ.

**(ಈ ಹಂತದಲ್ಲಿ *ಸ. ಸ. ಅ.* ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಆರೋಪಿಯು ನನ್ನ ಅಕ್ಕನ ಮಗನಾಗಿದ್ದು, ಆತ ರಾಮನಾಥಪುರದ ಕೋಟಾಳು ಗ್ರಾಮದ ನಾರಾಯಣ ಎಂಬುವರ ಮಗಳಾದ ಚಾಸಾ2 ರವರನ್ನು ಮದುವೆ ಮಾಡಿಕೊಂಡಿದ್ದು, ಆತ ಚಾಸಾ-2 ರವರನ್ನು ಮದುವೆ ಮಾಡಿಕೊಂಡ ನಂತರ ನಾನು ಅಷ್ಟಾಗಿ ಅಕ್ಕನ ಮನೆಗೆ ಹೋಗುತ್ತಿರಲಿಲ್ಲ, ಹಾಗೆಯೇ ಅವರು ಸಹ ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 2011 ನೇ ಇಸವಿಯಲ್ಲಿ ನನ್ನ ಅಕ್ಕನ ಮಗನಾದ ಆರೋಪಿಯು ನಮ್ಮ ಮನೆಗೆ ಬಂದು ತನ್ನ ಹೆಂಡತಿ ಚಾಸಾ-2 ರವರು ಖಾಯಿಲೆಯಿಂದ ಸತ್ತಿರುವುದಾಗಿ ತಿಳಿಸಿ, ತನಗೆ 2 ನೇ ಮದುವೆಯಾಗಬೇಕಾಗಿರುವುದರಿಂದ ಎಲ್ಲಾದರೂ ಹೆಣ್ಣು ಇದ್ದರೆ ನೋಡುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಸದರಿ ವಿಚಾರವನ್ನು ನಮ್ಮ ಊರಿನವರಾದ ಚಾಸಾ8 ರವರಿಗೆ ತಿಳಿಸಿದ್ದು, ಆತ ಸದರಿ

ವಿಚಾರವನ್ನು ಅವರಿಗೆ ಪರಿಚಯವಿರುವ ಚಾಸಾ3 ರವರಿಗೆ ಹೇಳಿದಾಗ ಚಾಸಾ3 ರವರು ಹುಡುಗನ ಮನೆತನ ಹಾಗೂ ಕೆಲಸದ ಬಗ್ಗೆ ವಿಚಾರಿಸಿ, ಮದುವೆ ಮಾತುಕತೆ ನಡೆಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ದಿನಾಂಕ 23-03-2011 ರಂದು ಆರೋಪಿ ಹಾಗೂ ಚಾಸಾ-1 ರವರ ನಿಶ್ಚಿತಾರ್ಥ ಮಾಡಿಸಿ, ದಿನಾಂಕ 25-03-2011 ರಂದು ಹುಣಸೂರಿನ ಪರಸಯ್ಯನ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿವಾಹ ನಿಶ್ಚಿತಾರ್ಥದ ಸಮಯದಲ್ಲಿ ಚಾಸಾ-3 ರವರು ಆರೋಪಿಗೆ ಒಂದು ಲಕ್ಷ ವರದಕ್ಷಿಣೆ ಹಾಗೂ 8 ಗ್ರಾಂ ಚಿನ್ನದ ಉಂಗುರವನ್ನು ಉಡುಗರೆಯಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ಹಾಗೂ ಚಾಸಾ-1 ರವರು ಮದುವೆಯಾಗಿ ಸ್ವಲ್ಪ ದಿನದವರೆಗೆ ಅನ್ಯೂನ್ಯವಾಗಿದ್ದು, ನಂತರ ಅವರಿಗೆ ಒಂದು ಹೆಣ್ಣು ಮಗುವಾಗಿ ಚಾಸಾ1 ರವರು ಬಾಣಾಂತನಕ್ಕೆ ತವರು ಮನೆಗೆ ಬಂದು ಹೋಗುವಷ್ಟರಲ್ಲಿ ಆರೋಪಿಯ ಮೊದಲನೇ ಹೆಂಡತಿಯಾದ ಚಾಸಾ-2 ರವರು ಆತನ ಮನೆಗೆ ಬಂದಿದ್ದು, ನಂತರ ಆರೋಪಿಯು ಚಾಸಾ-1 ಹಾಗೂ ಆಕೆಯ ಮಗುವಿಗೆ ತೊಂದರೆ ಕೊಡುತ್ತಿರುವುದಾಗಿ ಚಾಸಾ1 ರವರು ಚಾಸಾ-3 ರವರಿಗೆ ತಿಳಿಸಿರುವುದಾಗಿ ಚಾಸಾ-3 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಂತರ ನಾವು ಊರಿನವರೆಲ್ಲ ಕೂತು ಮಾತುಕತೆ ಮಾಡಿದ್ದು, ಆಗ ಆರೋಪಿಯು ಚಾಸಾ-2 ರವರು ಶಿಕ್ಷಕಿಯಾಗಿ ಸರ್ಕಾರಿ ಕೆಲಸದಲ್ಲಿರುವುದರಿಂದ ನಮಗೆ ಸಹಾಯವಾಗುತ್ತದೆ ಚಾಸಾ-1 ರವರು ನಾವು ಹೇಳಿದಂತೆ ಕೇಳಿಕೊಂಡು ಮನೆಯಲ್ಲಿ ಕೆಲಸ ಮಾಡಿಕೊಂಡು ಇರುವುದಾದರೆ ಇರಲಿ, ಇಲ್ಲದಿದ್ದರೆ ಡಿವೋರ್ಸ್ ಕೊಟ್ಟು ಹೋಗಲಿ ಎಂದು ಗಲಾಟೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಇದಾದ ನಂತರ ಒಂದು ದಿನ ಆರೋಪಿಯು ಚಾಸಾ1 ರವರಿಗೆ ಕೋವಿಯನ್ನು ತೋರಿಸಿ, ಆಕೆಯನ್ನು ಗುಂಡು ಒಡೆದು ಸಾಯಿಸವುದಾಗಿ  ಕೊಲೆ ಬೆದರಿಕೆ ಹಾಕಿ, ಆಕೆಯನ್ನು ಒಂದು ಕೋಣೆಯಲ್ಲಿ ಹಾಗೂ ಆಕೆಯ ಮಗುವನ್ನು ಮತ್ತೊಂದು ಕೋಣೆಯಲ್ಲಿ ಕೂಡಿ ಹಾಕಿ, ಆಕೆಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿರುವುದಾಗಿ ಹಾಗೂ ಆಕೆಯಲ್ಲಿ ಮನೆಯಿಂದ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುವುದಾಗಿ ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಚಾಸಾ1 ರವರು ಆರೋಪಿಯ ವಿರುದ್ಧ ಪುಕಾರನ್ನು ನೀಡಿದ್ದು, ಈ ಬಗ್ಗೆ ನಾನು ದಿನಾಂಕ 19-05-2017 ರಂದು ಪೋಲಿಸರ ಮುಂದೆ "  ಹಿರಿಯವನು ಗೋಪಾಲ್ ರಾಜ್ ಅವರು ಸಿ ಆರ್ ಪಿ ಎಫ್ ನಲ್ಲಿ ------------------------------------------------------- ದೂರನ್ನು ಕೊಟ್ಟಿರುತ್ತಾರೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ

ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ22 ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಈ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದು, ಈ ಬಗ್ಗೆ ಪೋಲಿಸರಿಗೆ ನಿಪಿ 22 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿ ನನ್ನ ಅಕ್ಕನ ಮಗನಾದ್ದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು ಃ ಶ್ರೀ. ಬಿ ಎಸ್ ಪಿ ಆರೋಪಿ ಪರ ವಕೀಲರಿಂದ ಃ</u>**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ ಃ 815/2017**

**ಚಾಸಾ ಃ 28**
**ಪ್ರಾಸಾ ಃ 18**

| | |
|---|---|
| **ಹೆಸರು** | ಃ ಪಿ ಸಿ ಶಿವಪ್ಪ |
| **ತಂದೆಯ ಹೆಸರು** | ಃ ಲೇಟ್ ಪಿ ಬಿ ಚಿನ್ನಪ್ಪ |
| **ವಯಸ್ಸು** | ಃ 67 ವರ್ಷ |
| **ಉದ್ಯೋಗ** | ಃ ನಿವೃತ್ತ ಎ ಎಸ್ ಐ |
| **ವಾಸಸ್ಥಳ** | ಃ ಓಂಕಾರ ಬಡಾವಣೆ, ಕುಶಾಲನಗರ |

**ದಿನಾಂಕ ಃ 04-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು 2014 ನೇ ಇಸವಿಯ ಮೇ ತಿಂಗಳಿನಿಂದ ದಿನಾಂಕ 30-06-2018 ರವರೆಗೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 31-05-2017 ರಂದು ವಿರಾಜಪೇಟೆ ನಗರ ವೃತ್ತ ನಿರೀಕ್ಷಕರಾದ ಚಾಸಾ-30 ರವರು ನನಗೆ ಈ ಪ್ರಕರಣದ ಕಡತವನ್ನು ನೀಡಿ, ಆರೋಪಿ ಹಾಗೂ ಚಾಸಾ-1 ರವರ ಮದುವೆಯಾದ ಕಲ್ಯಾಣ ಮಂಟಪದ ಮಹಜರ ಕ್ರಮ ಜರುಗಿಸುವಂತೆ ತಿಳಿಸಿದ್ದು, ಅವರ ಆದೇಶದಂತೆ ನಾನು ಅದೇ ದಿನ ಹುಣಸೂರಿನ ಪರಸಯ್ಯನ ಕಲ್ಯಾಣ ಮಂಟಪಕ್ಕೆ ಹೋಗಿದ್ದು, ಅಲ್ಲಿ ಪಿರ್ಯಾದಿಯಾದ ಚಾಸಾ-1 ರವರು ಹಾಜರಿದ್ದು ಅಲ್ಲಿಗೆ ಪಂಚರಾದ ಚಾಸಾ10 ಹಾಗೂ 13 ರವರನ್ನು ಬರಮಾಡಿಕೊಂಡು, ಮಹಜರಿಗೆ ಸಾಕ್ಷಿಯಾಗುವಂತೆ ಕೋರಿಕೊಂಡು ಅವರು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ತನ್ನ ಹಾಗೂ ಆರೋಪಿಯ ನಡುವೆ ಇದೇ ಕಲ್ಯಾಣ ಮಂಟಪದಲ್ಲಿ ಮದುವೆಯಾಗಿರುವುದಾಗಿ ತೋರಿಸಿಕೊಟ್ಟಿದ್ದು, ನಂತರ ಚಾಸಾ-1, 10 ಹಾಗೂ 13 ರವರ ಸಮಕ್ಷಮ ಅಲ್ಲಿ ಮಹಜರ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ12 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ

ಮೇರೆಗೆ ನಿಪಿ12 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ12(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋ ಎಂದು ಗುರುತಿಸುತ್ತಾರೆ. (ಕಡತವನ್ನು ಪರಿಶೀಲಿಸಲಾಗಿ ಹಿಂದೆ ಚಾಸಾ-1 ರವರ ಸಾಕ್ಷ್ಯ ವಿಚಾರಣೆಯ ಸಮಯದಲ್ಲಿ ನ್ಯಾಯಾಲಯವು (ಹಿಂದಿನ ಮಾನ್ಯ ನ್ಯಾಯಾಧೀಶರು) ಎಲ್ಲಾ ಫೋಟೋಗಳನ್ನು ಒಟ್ಟಾರೆಯಾಗಿ ನಿಪಿ13 ಎಂದು ಗುರುತಿಸಿರುವುದು ಕಂಡು ಬಂದಿದ್ದು, ಆದ್ದರಿಂದ ಈಗ ಸಾಕ್ಷಿಗೆ ತೋರಿಸಿದ ಸದರಿ ಫೋಟೋವು ಸಹ ನಿಪಿ13 ಎಂದು ನಿಶಾನೆಗೆ ಒಳಪಟ್ಟಿದ್ದು, ಮುಂದಿನ ಸಮಯದಲ್ಲಿ ಗೊಂದಲವನ್ನು ತಪ್ಪಿಸುವ ಸಲುವಾಗಿ ಸದರಿ ಸಾಕ್ಷಿಗೆ ತೋರಿಸಿದ ಫೋಟೋವನ್ನು ಮತ್ತೇ ನಿಪಿ13(ಎ) ಎಂದು ಗುರುತಿಸಲಾಯಿತು). ನಂತರ ಚಾಸಾ-14 ಹಾಗೂ 16 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಅದೇ ದಿನ ಚಾಸಾ30 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟಿ ಸವಾಲು ಃ ಶ್ರೀ. ಬಿ ಎಸ್ ಪಿ / ಶ್ರೀಮತಿ ಬಿ ಡಿ ಪಿ ಆರೋಪಿ ಪರ ವಕೀಲರಿಂದ ಃ**

ಚಾಸಾ30 ರವರು ನನಗೆ ಮೌಖಿಕ ಆದೇಶ ಮಾಡಿರುತ್ತಾರೆ. ನಿಪಿ12 ಮಹಜರಿನ ಪಂಚರಾದ ಚಾಸಾ10 ಹಾಗೂ 13 ರವರನ್ನು ಸ್ಥಳಕ್ಕೆ ನಾನು ಕರೆಸಿರುತ್ತೇನೆ. ಸ್ಥಳದಲ್ಲಿ ಮಹಜರಿನ ಸಮಯದಲ್ಲಿ ಫೋಟೋ ತೆಗೆದಿರುವ ವಿಚಾರವನ್ನು ನಿಪಿ12 ಮಹಜರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಫೋಟೋವನ್ನು ನನ್ನ ಮೊಬೈಲ್ ನಿಂದ ತೆಗೆದಿರುತ್ತೇನೆ. ಆ ಸಮಯದಲ್ಲಿ ನಾನು ಎರಡು ಫೋಟೋ ತೆಗೆದಿರುತ್ತೇನೆ. ನಾನು ಸದರಿ ದಿನದಂದು ಹೇಳಿಕೆ ದಾಖಲಿಸಿಕೊಂಡು ಚಾಸಾ14 ಹಾಗೂ 16 ರವರು ಮಹಜರಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ಸದರಿ ಹೇಳಿಕೆಯನ್ನು ಸದರಿ ಪರಸಯ್ಯನ ಕಲ್ಯಾಣ ಮಂಟಪದಲ್ಲಿ ದಾಖಲಿಸಿಕೊಂಡು ನಂತರ ಠಾಣೆಗೆ ಬಂದು ಟೈಪ್ ಮಾಡಿಸಿರುತ್ತೇನೆ. ನಿಪಿ13(ಎ) ಫೋಟೋದಲ್ಲಿ ಕಲ್ಯಾಣ ಮಂಟಪದ ಹೆಸರು ಕಾಣುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹೆಸರು ಹೊರಗಡೆ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ13(ಎ) ಫೋಟೋ ಸದರಿ ಕಲ್ಯಾಣ ಮಂಟಪಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಾನು ತಿಳಿಸಿರುವಂತೆ ಯಾವುದೇ ಕಲ್ಯಾಣ ಮಂಟಪಕ್ಕೆ ಹೋಗಿರುವುದಿಲ್ಲ ಹಾಗೂ ಅಲ್ಲಿ ನಿಪಿ12 ರಂತೆ ಯಾವುದೇ ಮಹಜರ ಕ್ರಮ ಜರುಗಿಸಿರುವುದಿಲ್ಲ ಬದಲಾಗಿ ಈ ಪ್ರಕರಣಕ್ಕೋಸ್ಕರ ಸದರಿ ಮಹಜರನ್ನು ಠಾಣೆಯಲ್ಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ

ಸಮಕ್ಷಮ ಯಾವುದೇ ಸಾಕ್ಷಿದಾರರು ಹೇಳಿಕೆ ನೀಡಿರುವುದಿಲ್ಲ ಬದಲಾಗಿ ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಅವುಗಳನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.